ಬೇಸಗೆಯ ಮಧ್ಯಾಹ್ನದ ಹೊತ್ತು ಯಾವ ಚಿಂತೆಯಿಲ್ಲದೆ ಊಟಕ್ಕೆ ಕುಳಿತಿದ್ದೆ. ನಾನು, ಅಪ್ಪ, ದಿನೇಶ ಮೂವರೂ ಕೂತಿದ್ದರೆ, ಸರಸ್ವತಿ ಅಮ್ಮನಿಗೆ ಬಡಿಸಲು ಸಹಾಯ ಮಾಡುತ್ತಿದ್ದಳು. ಅತ್ತೆ ಎಂದಿನಂತೆ ಹೂವು ತರಲು ಪೇಟೆಗೆ ಹೋದವಳು, ಅದೇನೋ ಅಂದು ಅಷ್ಟೊತ್ತಾದರೂ ವಾಪಾಸಾಗಿರಲಿಲ್ಲ. ಅದೇ ಹೊತ್ತಿಗೆ ಹೀಗೇ ಏನೋ ಕಥೆಯಾಡಿಕೊಂಡು ಖುಷಿಯಾಗಿ ಉಣ್ಣುತ್ತಿದ್ದವರ ಎದೆ ಸೀಳುವಂಥ ಅಬ್ಬರವೊಂದು ಕಿವಿಗೆ ಬಿದ್ದಿತ್ತು.

'ಸಿವ್ನೇ ಸಿವ್ನೇ, ನಮ್ಮಗ್ಳು ಬಾಳು ಹಾಳ್ಮಾಡಾಕುದ್ನಲ್ಲಪ್ಪಾ, ದೊರೆಮಗ, ಲೋ ಬೈರೇಗೋಡ್ನೇ, ಮಗುನ್ನ ಹೆತ್ತು ಊರ್ಮೇಯಕ್ಕೆ ಬುಟ್ಟಿದ್ದೀಯಾ, ಬೇವರ್ಸಿ ಮುಂಡೇಗಂಡ್ನ, ನನ್ನ ಮಗ್ಳುನ್ನ ಬೊಸ್ರು ಮಾಡ್ಬುಟ್ಟು ಎಲ್ಲಿ ಅಂವುತ್ತಿದ್ದಾನು, ಹಾದ್ರುಕುಟ್ಟೋನು...'

ಒಂದು ಕ್ಷಣ ನಮಗೆ ಏನೆಂದರೆ ಏನೇನೂ ಅರ್ಥವಾಗಿರಲಿಲ್ಲ. ಯಾರೋ ಯಾರಿಗೂ ಬಯ್ಯುತ್ತಿರಬೇಕೆಂದು ಸುಮ್ಮನಾಗಿರುತ್ತಿದ್ದರೂ ಆಶ್ಚರ್ಯವಿಲ್ಲ. ಆದರೆ, ಅಪ್ಪನ ಹೆಸರು ಸದ್ದು ಮಾಡಿತ್ತು, ಅಪ್ಪನ ಜೊತೆ ನನ್ನ ಹೆಸರೂ... ನಾನು ಝಿಲ್ಲನೆ ಬೆವೆತಿದ್ದೆ. ಹೀಗೆ ಈ ಪರಿ ಯಾರೂ ಯಾವತ್ತೂ ನಮ್ಮೊಂದಿಗೆ ಮಾತಾಡಿರಲಿಲ್ಲ. ಹೀಗೆ ಕೂಗಿ ಕರೆದು ಜಗಳವಾಡಿರಲಿಲ್ಲ. ಅಪ್ಪನಿಗೆಂದು ಊರೊಳಗೊಂದು ಮರ್ಯಾದೆಯಿತ್ತು. ಮಾತಿಗೆ ಬೆಲೆಯಿತ್ತು. ಅಂಥವನನ್ನು ಹೀಗೆ ಯಾರಾದರೂ ಬಯ್ಯುತ್ತಾರೆಂದರೆ ಅದು ನಂಬಲಸಾಧ್ಯವಾಗಿತ್ತು.

ಮೊತ್ತಮೊದಲ ಬಾರಿಗೆ ಅಪ್ಪನ ವಿರುದ್ಧ ಅರ್ಥಾತ್ ನನ್ನ ವಿರುದ್ಧ ಪಂಚಾಯಿತಿ ಕರೆದು ಕೂರಿಸಲಾಗಿತ್ತು.

'ಈಯಮ್ಮ ಹೇಳುದು ನಿಜ್ವೇ? ನಿನ್ ಮಗ ಏನಂತಾನೆ?' ಮುಖ್ಯಸ್ಥ.

'ನನ್ ಮಗ ಅಂಗ್ಮಾಡಕ್ಕೆ ಸಾದ್ಯಾನೇ ಇಲ್ಲ, ಅವ್ನಂತೋನಲ್ಲ'. ಅಪ್ಪ.

'ಯಾವಪ್ಪ ತಾನೇ ಒಪ್ಗಂಡಾನು? ನನ್ ಮಗ ಇಂಗಿಂಗೇಂತ? ಅವ್ಯೆದುನ್ನೇ ಕ್ಯೋಳಿ ಪಸ್ಟು' ಊರಲ್ಲೊಬ್ಬ, ಮತ್ತಿಬ್ಬರು, ಬಹುತೇಕ ಎಲ್ಲರೂ...

'ಇವ್ರೇ...' ನನ್ನನ್ನು ಗುರ್ತು ತೋರಿಸಿ ತಲೆತಗ್ಗಿಸಿ ಅಳುತ್ತಿರುವ ಹೊನ್ನಿಯ ಮಗಳು.

'ಛೆ ಇದೆಲ್ಲ ಸುಳ್ಳು, ನಾನ್ಯಾಕ್ ಹಂಗ್ಮಾಡ್ಲಿ?' ದನಿಯಿಡುಗಿ ಹೋಗಿರುವ ನಾನು.

ಎಲ್ಲರೆದುರು ತಲೆ ತಗ್ಗಿಸಿ ನಿಂತಿರುವ ಅಪ್ಪನನ್ನು ಕಂಡು ಜೀವ ನಡುಗಿ, ಸಾಮಾನ್ಯವಾಗಿ ಯಾವಾಗಲೂ ಧೈರ್ಯವಾಗಿ ಮಾತಾಡುತ್ತಿದ್ದ ನಾನು ಎಂದಿಲ್ಲದಂತೆ ಕುಸಿದುಹೋಗಿದ್ದೆ.

'ಸ್ವಾಮಿ, ಬಡುವ್ರು ನಾವು, ನಮ್ಮನೆ ಹೆಣ್ಮಗ್ಳುನ್ನ ನಿಮ್ಮೂ ಅನ್ಕಂಡು ನ್ಯಾಯ ಕೊಡ್ಸಿ, ಅಣಕಾಸಿರೋರು ತೀಟೆ ತೀರುಸ್ಕೊಂಡು ಒಂಟೋಗ್ಬುಟ್ರೆ ನನ್ಮಗ್ಳು ಗತಿ ಏನು? ನಾಳಿಕೆ ಯಾರ್ ಮಾಡ್ಕಂಡಾರು, ಹಿಂಗಿಂಗೇಂತ ಗೊತ್ತಾದ್ರೆ, ಇನ್ನು ಇದಾವಲ್ಲ ಮೂರು, ಅವುನ್ನ ಯಾರು ಮಾಡ್ಕಂಡಾರು? ದಯ್ವಿಟ್ಟು ನ್ಯಾಯ ಕೊಡ್ಸಿ, ಮುಂದ್ಲು ಮೂರ್ತಕ್ಕೆ ಮೊದ್ವೆ ಮಾಡುಸ್ಬುಡಿ ದೇವ್ರು, ನಿಮ್ ದಮ್ಮಯ್ಯ' ಎಂದು ಅಡ್ಡ ಬೀಳುತ್ತಿದ್ದ ಹೊನ್ನಿ...

ಅಪ್ಪ ನನ್ನ ಕಡೆಗೆ ನೋಡಿದ್ದ. ಎಂದಿಗೂ ಕಳೆಗುಂದದ ನಸುನಗುವಿನ, ಸ್ವಾಭಿಮಾನದ ಛಾಪನ್ನು ಬಿಂಬಿಸುತ್ತಿದ್ದ ಅಪ್ಪನ ಮುಖ ಎಷ್ಟೊಂದು ನೀರಸವೂ ಅಸಹಾಯಕವೂ ಆಗಿತ್ತು. ಅದನ್ನು ನೋಡಲಾರದೆ ನಾನು ತಲೆತಗ್ಗಿಸಿದ್ದೆ. ಬಹುಶಃ ತಗ್ಗಿಸಬಾರದಿತ್ತು.

ಅಷ್ಟೇ... ಅಪ್ಪ ಆ ತಲೆತಗ್ಗಿಸುವಿಕೆಯನ್ನ ಅದಿನ್ನೇನೆಂದು ಓದಿಕೊಂಡನೋ...

'ಪಂಚಾಯ್ತಿ ತೀರ್ಪೇನಾಯ್ತೋ ಅದ್ರಂಗೇ ನಡ್ಕಂತೀನಿ. ಇದ್ನ ಇಲ್ಗೇ ನಿಲ್ಸಿ, ನಾ ಬರ್ತೀನಿ' ಅಂದವನೇ ಅಲ್ಲಿಂದ ಹೊರಟುಬಿಟ್ಟಿದ್ದ.

ಅಪ್ಪನ ಹಿಂದೆಯೇ ಎಳೆಗರುವಿನಂತೆ 'ಅಪಾ... ಅಪಾ...' ಎನ್ನುತ್ತ ನಾನೂ ಬೆನ್ನು ಬಿದ್ದಿದ್ದೆ. ಅಪ್ಪ ಸುಮ್ಮನೆ ಕೂಡ ತಿರುಗಿ ನೋಡಿರಲಿಲ್ಲ, ಅಷ್ಟರಮಟ್ಟಿಗೆ ಕಲ್ಲಾಗಿದ್ದ. ಅವನು ಹಾರುನಡಿಗೆಯಲ್ಲಿ ಹೊಲದತ್ತ ಹೊರಟರೆ, ನಾನೂ ಹಾರುವ ಎದೆಬಡಿತವನ್ನು ಹಿಡಿಯಲು ಯತ್ನಿಸುತ್ತ ಹಿಂದಿಂದೇ ಓಡತೊಡಗಿದ್ದೆ. ಅವನನ್ನು ಹಿಡಿದು ನಿಲ್ಲಿಸಿ 'ಅಪ್ಪಾ, ಇದೆಲ್ಲಾ ಸುಳ್ಳು, ಕಾಪಾಡು ನನ್ನನ್ನ' ಅಂತ ಕೂಗಬೇಕೆನಿಸಿತ್ತು. ಆದರೆ, ಅಪ್ಪ ಅದಕ್ಕೆಲ್ಲ ಅವಕಾಶವನ್ನೇ ಕೊಡದೆ ಹೊಲದ ಮೋಟಾರುಬಾವಿಗೆ ಹಾರಿಕೊಂಡಿದ್ದ. ಹಾರುತ್ತಿದ್ದ ಎದೆಬಡಿತ ಹಠಾತ್ತನೆ ನಿಂತಂತಾಗಿ ಬಾಯೊಣಗಿ ಬವಳಿ ಬಿದ್ದಿದ್ದೆ. ವಾಸ್ತವದಲ್ಲಿ ನಾನೂ ಬಾವಿಯೊಳಗೇ ಬಿದ್ದಿರಬೇಕಿತ್ತು. ಆದರೆ, ನಾನು ಕಣ್ತೆರೆದಾಗ,